ಪರಾ:

1)	ಆರ್.ಆರ್.ಎಸ್	:	ಕೊರಕಲು ಸುಧಾರಣಾ ನಿನ್ಯಾಸ
2)	ಎಲ್.ಬಿ.ಸಿ.	:	ಸಡಿಲ ಬೌಲ್ಡರ್ ತಡೆ
3)	ಡಿ.ಎಸ್.ಪಿ.	:	ಅಲ್ಪ ಆಳದ ತೋಡು ಬಾವಿ
4)	ವಿ.ಎಫ್.ಎಸ್.	:	ಸೆಸ್ಯ ನೋನು ಬದು

ಹಿಪ್ಪರಗಿ ಬ್ಯಾರೇಜಿನ ವಿವರಣೆ ಕುರಿತು

1384 (1688) ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್ (ಅಥಣಿ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಪ್ಪರಗಿ ಬ್ಯಾರೇಜ್ ಕ್ರಸ್ಟ್‌ಗೇಟ್‌ಗಳನ್ನು ಅಳವಡಿಸಿ ನೀರು ಸಂಗ್ರಹಣೆ ಕಾರ್ಯ ಯಾವಾಗ ಪ್ರಾರಂಭಿಸಲಾಗುವುದು;

ಆ) ಕರಿಮಸೂತಿ-ಸಾವಳಗಿ ಏತ ನೀರಾವರಿ ಯೋಜನೆ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಯಾವಾಗ ಸಲ್ಲಿಸಲಾಯಿತು;

ಇ) ತಾಂತ್ರಿಕ ಹಾಗೂ ಆಡಳಿತಾತ್ಮಕ ಅನುಮೋದನೆ ಯಾವಾಗ ಆಯಿತು;

ಈ) ಈ ಯೋಜನೆಯ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಯಾವಾಗ ಈ ಯೋಜನೆ ಪೂರ್ಣಗೊಳಿಸುವ ಗುರಿ ಸರ್ಕಾರ ಹೊಂದಿದೆ;

ಉ) ಈ ಯೋಜನೆಯಿಂದ ಬರಗಾಲ ಪೀಡಿತ ಎಷ್ಟು ಹಳ್ಳಿಗಳಿಗೆ ಹಾಗೂ ಎಷ್ಟು ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಸಿಗುತ್ತದೆ;

ಊ) ಅಥಣಿ ತಾಲ್ಲೂಕಿನ ಮಹಾರಾಷ್ಟ್ರ ಗಡಿಭಾಗದ ಬರಗಾಲು ಪೀಡಿತ ಸುಮಾರು 30 ಗ್ರಾಮಗಳಿಗೆ ಕೆಂಪವಾಡ ಏತ ನೀರಾವರಿ ಯೋಜನೆ ಮೂಲಕ ಸದರಿ ಗ್ರಾಮಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಹಿಪ್ಪರಗಿ ಯೋಜನೆಯಲ್ಲಿ ಪ್ರತ್ಯೇಕವಾದ ಕೆಂಪವಾಡ ನೀರಾವರಿ ಯೋಜನೆಯನ್ನು ಕೈಗೊಳ್ಳಲು ಆ ಭಾಗದ ಜನರು ಒತ್ತಾಯಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ)ಹಿಪ್ಪರಗಿ ಬ್ಯಾರೇಜಿನ ಕ್ರಸ್ಟ್‌ಗೇಟ್ ಅಳವಡಿಸುವ ಕಾಮಗಾರಿಯನ್ನು ಟೆಂಡರ್ ಮುಖಾಂತರ ವಹಿಸಿಕೊಡಲಾಗಿದೆ. ಕ್ರಸ್ಟ್‌ಗೇಟ್ ಅಳವಡಿಸುವ ಕಾಮಗಾರಿಯನ್ನು ಒಂದು ವರ್ಷದ ಅವಧಿಯಲ್ಲಿ ಪೂರ್ಣಗೊಳಿಸಲು ಕಾಲಾವಕಾಶವನ್ನು ನೀಡಲಾಗಿದ್ದು ಕ್ರಸ್ಟ್‌ಗೇಟ್ ಅಳವಡಿಕೆಯ ಪೂರ್ಣಗೊಂಡ ಕೂಡಲೇ ನೀರಿನ ಸಂಗ್ರಹ ಪ್ರಾರಂಭಿಸಲಾಗುತ್ತದೆ.

ಆ) ಕರಿಮಸೂತಿ-ಸಾವಳಗಿ ಏತ ನೀರಾವರಿ ಯೋಜನೆ ಒಳಗೊಂಡಂತೆ ಪರಿಷ್ಕೃತ ಹಿಪ್ಪರಗಿ ಯೋಜನೆ ರೂ.901.00 ಕೋಟಿ ಅಂದಾಜನ್ನು ದಿನಾಂಕ:14-6-2001 ರಲ್ಲಿ ಸರ್ಕಾರಕ್ಕೆ ಸಲ್ಲಿಸಿರುವರು.

ಇ) ಹಿಪ್ಪರಗಿ ನೀರಾವರಿ ಯೋಜನೆಯಲ್ಲಿ ಕರಿಮಸೂತಿ-ಸಾವಳಗಿ ತುಂಗಳ ಒಲಗೊಂಡಂತೆ ಸರ್ಕಾರದ ಆದೇಶ ನೀಇ:17:ಹಿಆಯೋ:2000:ದಿನಾಂಕ:16-6-2001 ರಲ್ಲಿ ರೂ.901.00 ಕೋಟಿ ರೂ.ಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ.

ಈ) ಹಿಪ್ಪರಗಿ ನೀರಾವರಿ ಯೋಜನೆಯು ಪ್ರಗತಿಯಲ್ಲಿದ್ದು ಈ ಯೋಜನೆಯನ್ನು ಡಿಸೆಂಬರ್ 2004ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

ಉ) ಹಿಪ್ಪರಗಿ ನೀರಾವತಿ ಯೋಜನೆಯಿಂದ ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ ಹಾಗೂ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಒಟ್ಟು 56 ಗ್ರಾಮಗಳ ಒಟ್ಟು 74,742 ಹೆ.ಕ್ಷೇತ್ರಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗುವುದು.

ಊ) ಬಂದಿದೆ ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಕೆಂಪವಾಡ, ನವಲಿಹಾಳ ಇತ್ಯಾದಿ ಗ್ರಾಮಗಳ ಒಟ್ಟು 432 ಹೆಚ.ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವುದಕ್ಕಾಗಿ ಯೋಜನಾ ವರದಿಯನ್ನು ತಯಾರಿಸಲು ಆದೇಶವನ್ನು ನೀಡಲಾಗಿದೆ. ವರದಿ ಬಂದ ನಂತರ ಪರಿಶೀಲಿಸಿ ಯೋಜನೆಯನ್ನು ಕೈಗೊತ್ತಿಕೊಳ್ಳಲಾಗುವುದು.

ದ.ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ತೋಟಗಾರಿಕೆ ಬೆಳೆಗಳಿಗೆ ಪ್ರೋತ್ಸಾಹ.

1385 (1772) ಶ್ರೀ ಗೋಪಾಲ ಬಾಂಡಾರಿ ಹೆಚ್ (ಕಾರ್ಕಳ): ಮಾನ್ಯ ಜಲ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇತ್ತೀಚೆಗೆ ತೋಟಗಾರಿಕಾ ಬೆಳೆಗಳಿಗೆ ಜನರು ಹೆಚ್ಚು ಆಸಕ್ತರಾಗಿರುವುದರಿಂದ ತಾಂತ್ರಿಕ ಮಾಹಿತಿಯನ್ನು ಒದಗಿಸಲು ತಾಲ್ಲೋಕುವಾರು ಇರುವ ಇಲಾಖಾ ಸೌಲಭ್ಯದ ಬಗ್ಗೆ ಮಾಹಿತಿ ಒದಗಿಸುವುದು.

ಆ) ವೆನಿಲ್ಲಾ ಬೆಳೆಗೆ ಹೆಚ್ಚು ರೈತರು ಆಸಕ್ತರಾಗಿರುತ್ತಾರೆ ಮತ್ತು ಮಲ್ಲಿಗೆ ಕೃಷಿ ಮಾಡಲು ಆಸಕ್ತರಾಗಿರುವ ರೈತರಿಗೆ ಯಾವ ರೀತಿಯ ಪ್ರೋತ್ಸಾಹ, ಮಾಹಿತಿ ಮತ್ತು ಗಿಡಗಳನ್ನು ಒದಗಿಸಲಾಗುತ್ತಿದೆ?

ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಚಿವರು):

ಅ) ಜಿಲ್ಲೆ ಮಟ್ಟದಲ್ಲಿ ತೋಟಗಾರಿಕೆ ಉಪನಿರ್ದೇಶಕರು, ತಾಲ್ಲೂಕು ಮಟ್ಟದಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಸಹಾಯಕ ತೋಟಗಾರಿಕೆ ಅಧಿಕಾರಿ, ತೋಟಗಾರಿಕೆ ಸಹಾಯಕರುಗಳ ಒಟ್ಟು 29 ಮತ್ತು 18 ತಾಂತ್ರಿಕ ಹುದ್ದೆಗಳು ಕ್ರಮವಾಗಿ ಇರುತ್ತವೆ. ಇವರುಗಳು ಇಲಾಖಾ ಕಾರ್ಯಗಳ ಜೊತೆ ತಾಂತ್ರಿಕ ಮಾಹಿತಿ ಒದಗಿಸುತ್ತಿರುತ್ತಾರೆ.

ಆ) 1. ವೆನಿಲ್ಲಾ ಮತ್ತು ಮಲ್ಲಿಗೆ ಅಭಿವೃದ್ಧಿಗಾಗಿ ರೈತರಿಗೆ ಬೇರುಳ್ಳ ವೆನಿಲ್ಲಾ ಗಿಡಗಳನ್ನು ಮತ್ತು ಮಲ್ಲಿಗೆ ಗಿಡಗಳನ್ನು ವಿತರಿಸಿ ಪ್ರಾತ್ಯಕ್ಷತೆಗಳನ್ನು ಏರ್ಪಡಿಸಲಾಗುತ್ತಿದೆ.

2. ಬೆಳೆಯ ಬಗ್ಗೆ ಮಾಹಿತಿಯನ್ನು ಇಲಾಖೆಯ ತಾಲ್ಲೋಕು: ಜಿಲ್ಲೆಯ ತೋಟಗಾರಿಕೆ ಹಾಗೂ ವಿಸ್ತರಣಾಧಿಕಾರಿಗಳು ನೀಡುತ್ತಾರೆ. ವಿವರಗಳನ್ನು ಪ್ರಚಾರ ಮಾಧ್ಯಮದ ಮೂಲಕ ಮನದಟ್ಟು ಮಾಡಲು ಇಲಾಖೆಯ ಅಧಿಕಾರಿಗಳು ಕ್ರಮ ಕೈಗೊಳ್ಳಲಿದ್ದಾರೆ.

3. ಉಡುಪಿ ಜಿಲ್ಲೆಯ ಶಂಕರಾಪುರದಲ್ಲಿ ಉಡುಪಿ ಮಲ್ಲಿಗೆ ಬೆಳೆಗಾರರ ಸಂಘವನ್ನು ಮಾರ್ಚಿ 2002 ರಲ್ಲಿ ನೊಂದಾಯಿಸಲಾಗಿದೆ. ದಿನಾಂಕ:13-7-02 ರಂದು ಉಡುಪಿಯಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳು ಮಲ್ಲಿಗೆ ಬೆಳೆಗಾರರನ್ನು ಭೇಟಿ ಮಾಡಿ ಅವರೊಂದಿಗೆ ಚರ್ಚಿಸಿ ತಾಂತ್ರಿಕ ಸಲಹೆಗಳನ್ನು ನೀಡಿರುತ್ತಾರೆ. ಮಲ್ಲಿಗೆ ಬಗ್ಗೆ ವಿಚಾರ ಗೋಷ್ಠಿಯನ್ನು ಸೆಪ್ಟಂಬರ್ 2002 ರಲ್ಲಿ ಏರ್ಪಟಿಸುವ ಕಾರ್ಯಕ್ರಮವಿದೆ.